**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು-27**

**ಸಂ:ಕರಾಸಾ:ಕೇಕ:ಸಂ:ಸಿ2:1074: 2974:2013-14** **ದಿನಾಂಕ:01.08.2013**

## ಸುತ್ತೋಲೆ ಸಂಖ್ಯೆ: 1182 /2013

**(ಸಂಚಾರ (ವಾಣಿಜ್ಯ) ಇಲಾಖೆಯಿಂದ ಹೊರಡಿಸಲ್ಪಟ್ಟಿದೆ)**

**ವಿಷಯ:** ವಿಕಲಚೇತನರ ರಿಯಾಯಿತಿ ದರದ ಬಸ್‌ಪಾಸ್ ದರ ಪರಿಷ್ಕರಣೆ ಬಗ್ಗೆ.

**ಉಲ್ಲೇಖ:** 1. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:596/2007, ದಿ:27.07.2007,
2. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:620/2008, ದಿ:26.12.2008,
3. ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:636/2010, ದಿ:05.01.2010,
4. ಸಂ:ಸಾರಿಇ 23 ಸಾಸಂಯೋ 2012 (ಭಾ), ದಿನಾಂಕ: 12.07.2013,
5. ಸುತ್ತೋಲೆ ಸಂಖ್ಯೆ:1072/2011, ದಿನಾಂಕ: 02.05.2011,
6. ಸಂ:ಸಾರಿಇ 45 ಸಾಸಂಯೋ 2010, ದಿನಾಂಕ: 10.01.2011,
7. ಸಂ:ಸಾರಿಇ 123 ಸಾಸಂಇ 2011, ದಿನಾಂಕ: 20.06.2011.

** ** **

ರಾಜ್ಯ ರಸ್ತೆ ಸಾರಿಗೆ ನಿಗಮಗಳು ತಮ್ಮ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ಸರ್ಕಾರದ ನಿರ್ದೇಶನದಂತೆ ವಿಕಲಚೇತನರ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ವಿತರಿಸುತ್ತಿರುವುದು ಸರಿಯಷ್ಟೆ. ಈ ಮೊದಲು ವಿಕಲಚೇತನರ ರಿಯಾಯಿತಿ ದರದ ಬಸ್‌ಪಾಸ್ ಫಲಾನುಭವಿಗಳ ಸಂಖ್ಯೆಯನ್ನು ಒಂದು ಲಕ್ಷಕ್ಕೆ ಸೀಮಿತಗೊಳಿಸಲಾಗಿತ್ತು. ಉಲ್ಲೇಖಿತ (6)ರಲ್ಲಿನ ಸರ್ಕಾರದ ಆದೇಶದಲ್ಲಿ ವಿಕಲಚೇತನರಿಗೆ ವಿತರಿಸುತ್ತಿದ್ದ ರಿಯಾಯಿತಿ ಬಸ್‌ಪಾಸ್ ಸಂಖ್ಯೆಗೆ ಯಾವುದೇ ಗರಿಷ್ಟ ಮಿತಿಯನ್ನು ಸೂಚಿಸದೇ ಬಸ್‌ಪಾಸ್ ಕೋರಿ ಅರ್ಜಿ ಸಲ್ಲಿಸುವ ಎಲ್ಲಾ ವಿಕಲಚೇತನ ಫಲಾನುಭವಿಗಳಿಗೂ ಬಸ್‌ಪಾಸ್ ವಿತರಿಸುವಂತೆ ನಿರ್ದೇಶನ ನೀಡಿರುವುದರಿಂದ ಹಾಲಿ ಜಾರಿಯಲ್ಲಿರುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗುರುತಿಸಿ ಶಿಫಾರಸ್ಸು ಮಾಡುವ ಎಲ್ಲಾ ವಿಕಲಚೇತನ ಫಲಾನುಭವಿಗಳಿಗೂ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ವಿತರಿಸುವಂತೆ ಉಲ್ಲೇಖ (5)ರ ಸುತ್ತೋಲೆಯನ್ವಯ ಕ್ರಮಕೈಗೊಳ್ಳಲಾಗಿದೆ. ಉಲ್ಲೇಖಿತ (7)ರ ಸರ್ಕಾರದ ನಿರ್ದೇಶನದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಕ ಬಸ್‌ಪಾಸ್‌ಗಳನ್ನು ಸಂಗ್ರಹಿಸುವ ಕ್ರಮವನ್ನು ಕೈಬಿಟ್ಟು ವಿಕಲಚೇತನರ ರಿಯಾಯಿತಿ ದರದ ಬಸ್‌ಪಾಸ್‌ಗಳ ವಿತರಣಾ ವಿಧಾನವನ್ನು ಸರಳೀಕರಣಗೊಳಿಸುವ ದೃಷ್ಟಿಯಿಂದ ನಿಗಮದ ವತಿಯಿಂದಲೇ ನೇರವಾಗಿ ಹೊಸ ವಿಕಲಚೇತನ ಫಲಾನುಭವಿಗಳಿಗೆ ಅರ್ಜಿ ಪಡೆದು ಬಸ್‌ಪಾಸ್ ವಿತರಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಈ ವಿಕಲಚೇತನರ ರಿಯಾಯಿತಿ ಪಾಸಿನ ವೆಚ್ಚವನ್ನು ಸರ್ಕಾರದ ಅದೇಶದನ್ವಯ ಶೇ.25:25:50ರ ಅನುಪಾತದಲ್ಲಿ ಕ್ರಮವಾಗಿ ಫಲಾನುಭವಿಗಳು, ರಸ್ತೆ ಸಾರಿಗೆ ನಿಗಮಗಳು ಹಾಗೂ ರಾಜ್ಯ ಸರ್ಕಾರ ಭರಿಸಬೇಕಾಗಿರುತ್ತದೆ. ಅನುಗುಣವಾಗಿ ಶೇ.50ರ ವೆಚ್ಚವನ್ನು ಸರ್ಕಾರ ರಸ್ತೆ ಸಾರಿಗೆ ನಿಗಮಗಳಿಗೆ ಮರುಪಾವತಿ ಮಾಡಬೇಕಿದೆ.

ಪ್ರಸ್ತುತ ಉಲ್ಲೇಖಿತ (4)ರ ಸರ್ಕಾರದ ಆದೇಶದಲ್ಲಿ ವಿಕಲಚೇತನರ ರಿಯಾಯಿತಿ ಪಾಸಿನ ವಾರ್ಷಿಕ ವೆಚ್ಚವನ್ನು ₹2,200/- ಗಳಿಂದ ₹2,635/-ಗಳಿಗೆ ಪರಿಷ್ಕರಿಸಿ ನಿಗದಿಗೊಳಿಸಿರುತ್ತಾರೆ. ಅದರನ್ವಯ ವಿಕಲಚೇತನ ಫಲಾನುಭವಿಗಳು ಶೇ.25ರಷ್ಟು ಪಾಲು ಅಂದರೆ ₹660/- ಗಳನ್ನು ವಿಕಲಚೇತನರ ರಿಯಾಯಿತಿ ಪಾಸನ್ನು ಪಡೆಯುವ ಫಲಾನುಭವಿಗಳಿಂದ ಪಡೆಯಬೇಕಿರುತ್ತದೆ.

**ಆ ಪ್ರಕಾರವಾಗಿ ವಿಕಲಚೇತನರ ರಿಯಾಯಿತಿ ಪಾಸಿನ ದರವನ್ನು ₹660/-ಕ್ಕೆ ಪರಿಷ್ಕರಿಸಿದ್ದು, ಈ ದರ ಪರಿಷ್ಕರಣೆಯು ದಿನಾಂಕ: 02.08.2013 ರಿಂದ ಜಾರಿಗೆ ಬರಲಿದೆ.**

2013ನೇ ಸಾಲಿನಲ್ಲಿ ಈ ನಂತರದಲ್ಲಿ ವಿತರಣೆಯಾಗುವ ಪಾಸುಗಳಿಗೆ ₹660/- ಎಂದು ರೀ-ಸ್ಟ್ಯಾಂಪಿಂಗ್ ಮಾಡಿ ವಿತರಿಸಲು ಕ್ರಮ ಕೈಗೊಳ್ಳುವುದು.

ಉಳಿದಂತೆ ಈಗಾಗಲೇ ವಿತರಿಸಿ ಜಾರಿಯಲ್ಲಿರುವ ಸಾಮಾನ್ಯ ಸ್ಥಾಯಿ ಆದೇಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಸುತ್ತೋಲೆಯನ್ನು ಸ್ವೀಕರಿಸಿ ಜಾರಿಗೊಳಿಸಿದ ಬಗ್ಗೆ ಈ ಕಛೇರಿಗೆ ಅನುಸರಣಾ ವರದಿ ಸಲ್ಲಿಸುವುದು.

ಸಹಿ/-
(ಎನ್. ಮಂಜುನಾಥ ಪ್ರಸಾದ್)
ವ್ಯವಸ್ಥಾಪಕ ನಿರ್ದೇಶಕರು

**ಪ್ರತಿಯನ್ನು:**

1) ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2) ನಿರ್ದೇಶಕರು, ಅಂಗವಿಕಲರು ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ ಗೋಪುರ, ಬೆಂಗಳೂರು ಇವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3) ಎಲ್ಲಾ ಹಿರಿಯ/ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು /ಹುಬ್ಬಳ್ಳಿ/ಗುಲ್ಬರ್ಗಾ ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಎಲ್ಲಾ ಇಲಾಖಾ ಮುಖ್ಯಸ್ಥರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
6) ಅಧ್ಯಕ್ಷರು/ಉಪಾಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
7) ನಿರ್ದೇಶಕರು(ಸಿ&ಪ)/(ಭ&ಜಾ)/(ತಾ)/(ಕಾ)ರವರ ಹಿರಿಯ/ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರುರವರ ಮಾಹಿತಿಗಾಗಿ ಕಳುಹಿಸಲಾಗಿದೆ.
8) ಮುದ್ರಣ ನಿಯಂತ್ರಣಾಧಿಕಾರಿಗಳು ಕ.ರಾ.ಸಾ. ಮುದ್ರಣಾಲಯ, ಬೆಂಗಳೂರು ರವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಸಂಚಾರ ವ್ಯವಸ್ಥಾಪಕರು (ವಾ)

ಟ್ರಾಫಿಕ್_ದಿನೇಶ್